**ಆರ್‌ಬಿಐ/2006-07/92**
ಎಪಿ.(ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ. 4

ಜುಲೈ 28, 2006

ಗೆ,
ಎಲ್ಲ ಪ್ರವರ್ಗ-1 ರ ಅಧಿಕೃತ ವ್ಯಾಪಾರಿ ಬ್ಯಾಂಕುಗಳು.

ಮಾನ್ಯರೇ,

**ಸಂಯುಕ್ತ ವಲಯದಲ್ಲಿನ ವ್ಯವಹಾರಗಳಿಗೆ ವಿದೇಶೀ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐಗಳು) ಹೆಚ್ಚಿನ ಭದ್ರತೆಗಳನ್ನು ನಿರ್ವಹಿಸುವುದು.**

ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 120/ಆರ್‌ಬಿ-2004 ದಿನಾಂಕ 7ನೇ ಜುಲೈ 2004ರ ಮೂಲಕ ಅಧಿಸೂಚಿಸಲಾದ ವಿದೇಶೀ ವಿನಿಮಯ ನಿರ್ವಹಣೆ (ಯಾವುದೇ ವಿದೇಶೀ ಭದ್ರತೆಯ ವರ್ಗಾವಣೆ ಅಥವಾ ನೀಡಿಕೆ) ವಿನಿಯಮನಗಳು, 2004 ಮತ್ತು ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 20/2000-ಆರ್‌ಬಿ ದಿನಾಂಕ 3ನೇ ಮೇ 2000ದ ಮೂಲಕ ಅಧಿಸೂಚಿಸಲಾದ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ವಿದೇಶೀ ವಿನಿಮಯ ನಿರ್ವಹಣೆ (ಭಾರತದ ಹೊರಗೆ ನಿವಾಸಿಯಾಗಿರುವ ವ್ಯಕ್ತಿಯಿಂದ ಭದ್ರತೆಯ ವರ್ಗಾವಣೆ ಅಥವಾ ನೀಡಿಕೆ) ವಿನಿಯಮನಗಳು, 2000 ಇವುಗಳ ಕಡೆಗೆ ಪ್ರವರ್ಗ-1ರ ಅಧಿಕೃತ ವ್ಯಾಪಾರಿ ಬ್ಯಾಂಕುಗಳ ಗಮನವನ್ನು ಸೆಳೆಯಲಾಗಿದೆ.

2. ಭಾರತ ಸರ್ಕಾರದೊಂದಿಗೆ ಮತ್ತು ಭಾರತದ ಭದ್ರತಾ ಪತ್ರಗಳು ಮತ್ತು ವಿನಿಮಯ ಮಂಡಲಿಯೊಂದಿಗೆ (ಸೆಬಿ) ಸಮಾಲೋಚಿಸಿ, ಸಂಯುಕ್ತ ವಲಯದಲ್ಲಿ ತಮ್ಮ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಭಾರತದಲ್ಲಿರುವ ಮನ್ನಣೆ ಪಡೆದ ಸ್ಟಾಕ್‌ಎಕ್ಸ್‌ಚೇಂಜ್‌ಗಳಿಗೆ ಹೆಚ್ಚಿನ ಭದ್ರತೆಯಾಗಿ ಎಎಎ ಶ್ರೇಣಿಯ ವಿದೇಶಿ ಸ್ವಾಮ್ಯ ಭದ್ರತೆಗಳನ್ನು ನೀಡಲು ವಿದೇಶೀ ಸಾಂಸ್ಥಿಕ ಹೂಡಿಕೆದಾರರಿಗೆ ಅನುಮತಿಸಲು ನಿರ್ಧರಿಸಲಾಗಿದೆ. ಈ ಸಂಬಂಧದಲ್ಲಿ ಸೆಬಿ ಪ್ರತ್ಯೇಕವಾಗಿ ಪ್ರವರ್ತನಾ ಮಾರ್ಗಸೂಚಿಗಳನ್ನು ಹೊರಡಿಸುವುದು. ಆ ತರುವಾಯ ಭಾರತದಲ್ಲಿರುವ ಮನ್ನಣೆ ಪಡೆದ ಸ್ಟಾಕ್ ಎಕ್ಸ್‌ಚೇಂಜ್‌ಗಳು ವಿದೇಶೀ ವಿನಿಮಯ ನಿರ್ವಹಣಾ ಅಧಿನಿಯಮ, 1999ರ ಅಡಿಯಲ್ಲಿ ಅಗತ್ಯವಾಗಬಹುದಾದ ನಿರ್ದಿಷ್ಟ ಅನುಮೋದನೆಗಳಿಗಾಗಿ ಭಾರತೀಯ ರಿಸರ್ವ್ ಬ್ಯಾಂಕು, ವಿದೇಶೀ ವಿನಿಮಯ ಇಲಾಖೆ, ಕೇಂದ್ರ ಕಚೇರಿ, ಮುಂಬಯಿ-400001 ಇವರನ್ನು ಸಂಪರ್ಕಿಸಬಹುದು.

3. ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 20/2000-ಆರ್‌ಬಿ ದಿನಾಂಕ ಮೇ 3, 2000ದ ಮೂಲಕ ಅಧಿಸೂಚಿಸಲಾದ ವಿದೇಶೀ ವಿನಿಮಯ ನಿರ್ವಹಣೆ (ಭಾರತದ ಹೊರಗೆ ನಿವಾಸಿಯಾಗಿರುವ ವ್ಯಕ್ತಿಯಿಂದ ಭದ್ರತೆಯ ವರ್ಗಾವಣೆ ಅಥವಾ ನೀಡಿಕೆ) ವಿನಿಯಮನಗಳು, 2000 ಇದಕ್ಕೆ ಅವಶ್ಯಕ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

4. ಅಧಿಕೃತ ವ್ಯಾಪಾರಿ ಬ್ಯಾಂಕುಗಳು ಈ ಸುತ್ತೋಲೆಯಲ್ಲಿನ ಅಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಮತ್ತು ಗ್ರಾಹಕರ ಗಮನಕ್ಕೆ ತರುವುದು.

5. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣಾ ಅಧಿನಿಯಮ, 1999 (1999ರ 42) ರ 10(4) ಮತ್ತು 11(1) ನೇ ಪ್ರಕರಣಗಳ ಅಡಿಯಲ್ಲಿ ಮತ್ತು ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅಗತ್ಯಪಡಿಸಲಾದ ಅನುಮತಿಗಳು/ಅನುಮೋದನೆಗಳು ಯಾವುವಾದರೂ ಇದ್ದರೆ, ಅವುಗಳಿಗೆ ಬಾಧಕವಾಗದಂತೆ ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿ,
**ಸಲಿಂ ಗಂಗಾಧರನ್**
**ಮುಖ್ಯ ಪ್ರಧಾನ ವ್ಯವಸ್ಥಾಪಕರು-ಪ್ರಭಾರ.**